**ಓ.ಎಸ್. ನಂ. 732/2013      ಪಿ.ಡಬ್ಲೂ-2          ಹೆಸರು - ನಂಜಪ್ಪ**

**ಸಾಕ್ಷಿಯನ್ನು ದಿನಾಂಕಃ 16/11/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀಮತಿ.   ಎಂ.ಎನ್.ವಿ. ಪ್ರತಿವಾದಿಯರ ಪರ ವಕೀಲರಿಂದಃ-**

ಪ್ರತಿವಾದಿಯ ಸ್ವಾಧೀನದಲ್ಲಿ ಇರುವ ಸರ್ವೆ ನಂಬರ್ 114 ರ 20 ಗುಂಟೆ ಜಮೀನಿನ ಸ್ವಾಧೀನ ಕೋರಿ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಮಗೆ ಸೇರಿದ ಜಮೀನನ್ನು ದಿನಾಂಕ 20.09.1997 ರಲ್ಲಿ ಮಾರಾಟ ಮಾಡಿದ್ದೇವೆ ಎಂದರೆ ಸಾಕ್ಷಿಯು 1 ಎಕರೆ 36 ಗುಂಟೆ ಪೈಕಿ 1 ಎಕರೆ 16 ಗುಂಟೆಯನ್ನು ಮಾರಾಟ ಮಾಡಿ 20 ಗುಂಟೆಯನ್ನು ಉಳಿಸಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಸಂಬಂಧದಲ್ಲಿ ದಾಯಾದಿಗಳಾಗಬೇಕು. ಪ್ರತಿವಾದಿಯರ ತಂದೆಯ ಭಾಗಕ್ಕೆ ಬಂದ ಜಮೀನಿನ ಖಾತೆ ಮಾಡಿಸಿಕೊಂಡು ಪ್ರತಿವಾದಿಯರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 114 ರಲ್ಲಿ 1 ಎಕರೆ 36 ಗುಂಟೆ ಜಮೀನು ಇತ್ತು ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳುವಾಗ ಸಂಬಂಧಪಟ್ಟ ದಾಖಲಾತಿಗಳನ್ನು ಕಂದಾಯ ಇಲಾಖೆಗೆ ನೀಡಿರುತ್ತೇವೆ. ವಿಭಾಗದಲ್ಲಿ 1 ಎಕರೆ 36 ಗುಂಟೆ ನಮ್ಮ ಪಾಲಿಗೆ ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಭಾಗವು ಬರವಣಿಗೆಯ ಮೂಲಕ ಆಗಿರುತ್ತದೆ. ಸದರಿ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 114 ರಲ್ಲಿ 1 ಎಕರೆ 16 ಗುಂಟೆ ಮಾರಾಟ ಮಾಡುವಾಗ ಸಂಬಂಧಪಟ್ಟ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇವೆ. ನಾವು ಜಮೀನನ್ನು ಮಾರಾಟ ಮಾಡಿದಾಗ ಜಮೀನಿನ ಮೌಲ್ಯ ಕಡಿಮೆ ಇತ್ತು ಎಂದರೆ ಸರಿ. ಈಗ ಜಮೀನಿನ ಬೆಲೆ ಜಾಸ್ತಿಯಾಗಿದೆ ಎಂದರೆ ಸರಿ. ದಾವಾ ಸ್ವತ್ತಿನ ಖಾತೆ ಪ್ರತಿವಾದಿಯರ ಹೆಸರಿನಲ್ಲಿ ಇರುವ ವಿಚಾರ ನಿಮಗೆ ಯಾವಾಗ ತಿಳಿಯಿತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸುಮಾರು 9 ವರ್ಷಗಳ ಹಿಂದೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರು ಬೋರ್ ವೆಲ್ ಹಾಕಿಸಿಕೊಂಡು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಜಮೀನನ್ನು ಮಾರಾಟ ಮಾಡಿದ ಸಮಯದಲ್ಲಿಯೇ ಈ ದಾವೆಯನ್ನು ಸಲ್ಲಿಸಲು ತೊಂದರೆ ಇತ್ತೇ ಎಂದು ಕೇಳಿದ್ದಕ್ಕೆ ಸಾಕ್ಷಿಯು ಆಗ ನಮಗೆ ಸ್ವಲ್ಪ ತೊಂದರೆ ಇತ್ತು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಮೇಲೆ ನಮಗೆ ಯಾವುದೇ ರೀತಿಯ ಹಕ್ಕು ಇರದೇ ಇದ್ದರೂ ಕೂಡ ಪ್ರತಿವಾದಿಯರಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಜಮೀನನ್ನು ಮಾರಾಟ ಮಾಡಿದಾಗ ಉಳಿಕೆ 20 ಗುಂಟೆ ಜಮೀನು ಪ್ರತಿವಾದಿಯರಿಗೆ ಸೇರಿದ್ದು ಎಂದು ನಮಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಈಗ ಕೈಗಾರಿಕೆಗಳು ಬಂದು ಭೂಮಿಯ ಬೆಲೆ ಜಾಸ್ತಿಯಾಗಿರುವುದರಿಂದ ಪ್ರತಿವಾದಿಯರಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಮಗೆ ಇದ್ದ 1 ಎಕರೆ 16 ಗುಂಟೆಯನ್ನು ಮಾರಾಟಮಾಡಿದ್ದು, ದಾವಾ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಖರ್ಚನ್ನು ನೀಡುವ ಷರತ್ತಿಗೆ ಒಳಪಟ್ಟು ಸಮಯ ನೀಡಲಾಯಿತು.)

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**